ಅರ್ಜಿ ಸಲ್ಲಿಸಿದ್ದು ಅದರಲ್ಲಿ 8092 ಮಂದಿಗೆ ಪರಿಹಾರಧನ ನೀಡಲಾಗಿದೆ. ಉಳಿಕೆ 10 ಅರ್ಜಿಗಳು ಮೂಲದಾಖಲಾತಿ ಇಲ್ಲದ ಕಾರಣ ಬಾಕಿ ಉಳಿದಿದೆ. ಮೂಲ ದಾಖಲಾತಿಗಳನ್ನು ಒದಗಿಸಲು ಅರ್ಜಿದಾರರುಗಳಿಗೆ ನೋಟೀಸ್ ನೀಡಲಾಗಿದೆ.

ವಿಷಯ: ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರಿನ ಯೋಜನೆ

1057 (1475)

ಶ್ರೀ ವಿ.ಎಸ್.ಕರ್ಜಗಿ (ರಾಣೇಬೆನ್ನೂರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರ ನಗರಕ್ಕೆ ಮುದೆನೂರದಿಂದ ಕುಡಿಯುವ ನೀರಿನ ಯೋಜನೆ ಕೆಲಸ ಪ್ರಾರಂಭವಾಗಿ ಕೆಲಸವು ಅರ್ಧಕ್ಕೆ ನಿಂತಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಆ ಯೋಜನೆ ಯಾವಾಗ ಪ್ರಾರಂಭಿಸುವಿರಿ ಮತ್ತು ಯಾವ ಇಸವಿಗೆ ಮುಗಿಯುವುದು?

ಇ) ಈ ಯೋಜನೆಗೆ ಈಗಾಗಲೇ ಖರ್ಚು ಮಾಡಿದ ಹಣವೆಷ್ಟು? ಇನ್ನೂ ಖರ್ಚು ಮಾಡಬೇಕಾದ ಹಣ ಎಷ್ಟು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಬಂದಿದೆ.

ಆ) ಈ ಯೋಜನೆಯ ಉಳಿದ ಎಲ್ಲಾ ಕಾಮಗಾರಿಗಳಿಗೆ ಪ್ಯಾಕೇಜ್ ಟೆಂಡರ್‌ಗಳನ್ನು ಕರೆಯಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ಯೋಜನೆಯನ್ನು 1999ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಇ) ಈ ಯೋಜನೆಗೆ ಇಲ್ಲಿಯವರೆಗೆ ರೂ. 235.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆ ಪೂರ್ಣಗೊಳಿಸಲು ಇನ್ನೂ ರೂ. 1180.00 ಲಕ್ಷಗಳು ಬೇಕಾಗುತ್ತದೆ.

ವಿಷಯ: ಕೊಡಗು ಜಿಲ್ಲೆಯಲ್ಲಿ ಪುನರ್ ಭೂಮಾಪನ ಕಾರ್ಯ

1052 (1438)

ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?